ಸಾಕ್ಷಿಯನ್ನು ದಿ**. *30-07-2025*** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**.**

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ.ಓಎಂ ವಕೀಲರಿಂದ **:**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ವಿಚಾರ ಸರಿಯಿದ್ದು, ಸಹಿ ನನ್ನದೇ ಅಗಿರುತ್ತದೆ.

| | |
|---|---|
| ನಿ.ಪಿ.1 | ಪ್ರ.ವ.ವ |
| ನಿ.ಪಿ.2 | ದೂರು |
| ನಿ.ಪಿ.3 | ಸ್ಥಳ ಪಂಚನಾಮೆ |
| ನಿ.ಪಿ.4 | ಅಮಾನತು ಪಂಚನಾಮೆ |
| ನಿ.ಪಿ.5 | ಗಾಯದ ಪ್ರಮಾಣಪತ್ರ |
| ನಿ.ಪಿ.6 | ಎಂವಿ ವರದಿ |
| ನಿ.ಪಿ.7 | ಅಂತಿಮ ವರದಿ |
| ನಿ.ಪಿ.8 | ಆಧಾರ ಕಾರ್ಡಿನ ಅಟೆಸ್ಟಡ್ ಪ್ರತಿಯನ್ನು ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಸರಿ ಇರುವ ಕಾರಣ ಗುರುತಿಸಲಾಯಿತು |

ಪಾಟಿ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಎಸ್‌ಪಿ ವಕೀಲರಿಂದ.

ನಾನು ಬೆಂಗಳೂರಿನಿಂದ ಬೆಳ್ಳೂರು ಕ್ರಾಸ್‌ಗೆ ಬಸ್‌ನಲ್ಲಿ ಹೋಗುತ್ತಿದ್ದೆ. ಆ ದಿನ ತಾವು ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಬಗ್ಗೆ ಟಿಕೆಟನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಸಹ ಅದೇ ಸಂಸ್ಥೆಯಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದು ನನ್ನ ಗುರುತಿನ ಚೀಟಿಯ ಮೇಲೆ ಪ್ರಯಾಣ ಮಾಡುತ್ತಿದ್ದೆ ಎನ್ನುತ್ತಾರೆ. ಅಪಘಾತವು ರಾತ್ರಿ ಸುಮಾರು 10.00 ರ ಸಮಯದಲ್ಲಿ ಕಾಳಿಂಗನಹಳ್ಳಿ ಗೇಟಿನ ಬಳಿ ಆಗಿರುತ್ತದೆ. ನಾನು ಬಲಭಾಗದ ಮದ್ಯಭಾಗದ ಸೀಟಿನಲ್ಲಿ ಕುಳಿತಿದ್ದೆ. ಬಸ್ ಬೆಂಗಳೂರನ್ನು ರಾತ್ರಿ 7.00 ಕ್ಕೆ ಬಿಟ್ಟಿತ್ತು. ತಾವು ಅಪಘಾತವಾದಾಗ ಗಾಢ ನಿದ್ರೆಯಲ್ಲಿದ್ದಿರಿ ಎಂದರೆ ಸಾಕ್ಷಿಯು ಎಡಿಯೂರಿನ ಬಳಿ ಊಟಕ್ಕೆ ನಿಲ್ಲಿಸಿದ್ದ ಕಾರಣ ಎಚ್ಚರವಾಗೇ ಇದ್ದೆ ಎನ್ನುತ್ತಾರೆ.

2. ನಾನು ಹಾಜರು ಪಡಿಸಿರುವ ದಾಖಲೆಗಳು ನನಗೆ ಆದ ಗಾಯಗಳ ಬಗ್ಗೆ ಇದೆ ಎಂಬುದನ್ನು ತಿಳಿದುಕೊಂಡಿರುತ್ತೇನೆ. ನಿ.ಪಿ.7 ರಲ್ಲಿ ಲಾರಿ ಚಾಲಕನ ತಪ್ಪು ಇದೆ ಎಂದು ಉಲ್ಲೇಖಿಸಿರುತ್ತಾರೆ ಎಂದರೆ ಸರಿ. ತಾವು ಪರಿಹಾರವನ್ನು ಕೇವಲ ಲಾರಿ ಮಾಲೀಕರ ಬಳಿ ಕೇಳಬೇಕಾಗಿತ್ತೇ ಹೊರತು ಕೆಎಸ್‌ಆರ್‌ಟಿಸಿ ಸಂಸ್ಥೆಯ ಬಳಿ ಅಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ನೋಡಿರುತ್ತೇನೆ. ಅಂತಿಮ ವರದಿಯಲ್ಲಿ ನಮೂದಿಸಿರುವ ಅಂಶಗಳು

This is a True Copy of the Court Records Online. Authenticated @ districts.ecourtsindia.com/cnr/KABC020162892024/truecopy/order-2.pdf

www.ecourtsindia.com

ಸರಿಯಾಗಿರುತ್ತದೆ. ತಮಗೆ ಯಾವುದೇ ರೀತಿಯ ಗಾಯಗಳಾಗಿಲ್ಲ ಮತ್ತು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ತಮಗೆ ಯಾವುದೇ ರೀತಿಯ ಗಾಯಗಳಾಗಿಲ್ಲ ಮತ್ತು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲದ ಕಾರಣ ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ತಾವು ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸುವ ಉದ್ದೇಶದಿಂದ ಆಸ್ಪತ್ರೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆಸ ಸರಿಯಲ್ಲ. 3 ನೇ ಎದುರುದಾರರ ಚಾಲಕನ ತಪ್ಪು ಇರದ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

3. ತಮಗೆ ಭವಿಷ್ಯದ ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ತಾವು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 1 ನೇ ಎದುರುದಾರರು ಏಕಪಕ್ಷೀಯರಾದ ಕಾರಣ ಹಾಗೂ 2 ನೇ ಎದುರುದಾರರ ಗೈರು ಹಾಜರಾಗಿರುವ ಕಾರಣ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.
ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**(ಓ.ಹೇ.ಕೇ.ಸ.ಇ.)**

**23** ನೇ ಎ.ಎಸ್.ಸಿ.ಜೆ ಮತ್ತು ಎ.ಸಿ.ಜೆ.ಎಂ
ನ್ಯಾಯಾಧೀಶರು.
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC020162892024/truecopy/order-2.pdf